# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1982**
ಸದಸ್ಯರ ಹೆಸರು : ಶ್ರೀ ಕೆ.ಹರೀಶ್ ಕುಮಾರ್
(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : **16.03.2022.**
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗೋಮಾಳ, ಹುಲ್ಲುಬನಿ, ಗಾಯರಾಣ, ಸೊಪ್ಪಿನ ಬೆಟ್ಟ ಸೇರಿ ಗ್ರಾಮೀಣ ಪ್ರದೇಶದ ಸರ್ಕಾರದ ಜಮೀನುಗಳನ್ನು ಖಾಸಗಿ ಸಂಘ, ಸಂಸ್ಥೆಗಳಿಗೆ ಮಂಜೂರು ಮಾಡಲು ಮುಂದಾಗಿರುವುದು ನೀತಿ ಸಮಂಜಸವೇ; (ಸರ್ಕಾರದ ನಿಲುವನ್ನು ಸ್ಪಷ್ಟಪಡಿಸುವುದು) ಹಾಗಿದ್ದಲ್ಲಿ, ದನ-ಕರುಗಳ ಮೇವಿಗೆ ಅಭಾವ ಉಂಟಾಗುವುದಿಲ್ಲವೇ; ಸದರಿ ಸಮಸ್ಯೆ ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಇದರ ತೊಂದರೆ ಉಂಟಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; | ಗೋಮಾಳ, ಹುಲ್ಲುಬನಿ, ಗಾಯರಾಣ, ಸೊಪ್ಪಿನ ಬೆಟ್ಟ ಜಮೀನನ್ನು ಖಾಸಗಿ ಸಂಘ / ಸಂಸ್ಥೆಗಳಿಗೆ ಮಂಜೂರು ಮಾಡಲು ಅವಕಾಶವಿರುವುದಿಲ್ಲ.<br><br>"ಗೋಮಾಳ, ಗಾಯರಾಣ, ಹುಲ್ಲುಬನ್ನಿ, ಸೊಪ್ಪಿನಬೆಟ್ಟ ಇತ್ಯಾದಿ ಗ್ರಾಮೀಣ ಪ್ರದೇಶದ ಸರ್ಕಾರಿ ಜಮೀನುಗಳನ್ನು ಮಂಜೂರು ಮಾಡುವ ಕುರಿತು ಒಂದು ನೀತಿಯನ್ನು ರೂಪಿಸುವುದಕ್ಕಾಗಿ ಸಚಿವ ಸಂಪುಟದ ಉಪಸಮಿತಿಯನ್ನು ರಚಿಸಲಾಗಿರುತ್ತದೆ. |
| ಆ) | ಈಗಾಗಲೇ ಸರ್ಕಾರಿ ಜಾಗದಿಂದ ಮನೆ ಮತ್ತು ಗುಡಿಸಲು ನಿರ್ಮಿಸಿರುವ ಬಡ ರೈತಾಪಿ ಜನರು 94ಸಿ ಅಡಿಯಲ್ಲಿ ಹಕ್ಕು ಪತ್ರಕ್ಕೆ ಅರ್ಜಿ ಸಲ್ಲಿಸಿ, ಸರ್ಕಾರಿ ಆದೇಶಕ್ಕೆ ಕಾಯುತ್ತಿರುವಾಗ ಸದರಿ ಜಾಗವನ್ನು ಸಂಘ ಸಂಸ್ಥೆಗಳಿಗೆ ಮಂಜೂರು ಮಾಡಲು ಹೊಸ ನೀತಿಯನ್ನು ಜಾರಿಗೊಳಿಸಲು ಹೊರಡಿಸಿರುವುದು. ಸಮಂಜಸವೇ; ಈ ಕುರಿತಂತೆ ಸರ್ಕಾರದ ನಿಲುವೇನು; (ಸಂಪೂರ್ಣ ಮಾಹಿತಿ ಒದಗಿಸುವುದು) | |
| ಇ) | ಸದರಿ ಸರ್ಕಾರದ ನಿಲುವು ರೈತಾಪಿ ಜನರಿಗೆ ಮರಣ ಶಾಸನವಾಗಿದ್ದು, ಸರ್ಕಾರವು ತನ್ನ ನಿರ್ಧಾರವನ್ನು ಬದಲಿಸಿ ಸದರಿ ಗೋಮಾಳ, ಹುಲ್ಲುಬನ್ನಿ ಇತರೆ ಸರ್ಕಾರಿ ಜಾಗವನ್ನು ಈ ಹಿಂದೆ ಇರುವಂತೆ ಉಳಿಸಿಕೊಳ್ಳಲು ಕ್ರಮ ಕೈಗೊಳ್ಳುವುದೇ? (ವಿವರ ಒದಗಿಸುವುದು) | |

ಸಂಖ್ಯೆ: ಆರ್‌ಡಿ 110 ಎಲ್‌ಜಿಕ್ಯೂ 2022 (ಇ)

(ಆರ್.ಅಶೋಕ)
ಕಂದಾಯ ಸಚಿವರು